ಶ್ರೀ ಜೆ. ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ನನಗೆ ಹೆಚ್.ಸಿ. ಶ್ರೀಕಂಠಯ್ಯನವರು ಫೋನ್ ಮಾಡಿದ್ದು ಏಕೆ ಎಂದರೆ ನನ್ನ ಮೇಲೆ ವಿಶ್ವಾಸ ಇರುವುದರಿಂದ. ಆಫೀಸರ್‌ನ್ನು ಕೇಳಿ ಆಗಲೇ ಹೇಳಿದೆ, ಈಗ ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಅಲ್ಲಿ ಏನಾಗಿದೆ ಎಂದರೆ 400 ಜನ ತರಾತುರಿಯಲ್ಲಿ ಮೆಂಬರ್‌ಶಿಪ್ ಮಾಡಿಸಿ ಅದೇ ದಿವಸ ಮಾಡಿಸಿ, ಅದಕ್ಕೆ ಹೈಕೋರ್ಟ್ ಸ್ಟೇ ಇದೆ.

ಶ್ರೀ ಜೆ.ಹೆಚ್. ಪಟೇಲ್ : ಅದು ಏನೇ ಇರಲಿ, ಕಾನೂನಿನ ಪ್ರಕಾರ ಚುನಾವಣೆಯನ್ನು ನಡೆಸುವುದಕ್ಕೆ ನಮ್ಮದು ಏನೂ ಅಭ್ಯಂತರವಿಲ್ಲ.

ಅಧ್ಯಕ್ಷರು : ಇನ್ನೇನು ತೊಂದರೆ, ಚುನಾವಣೆಯನ್ನು ಮಾಡಿಸುತ್ತಾರೆ.

ಶ್ರೀ ಎಂ. ನಾರಾಯಣಸ್ವಾಮಿ : ಅಲ್ಲಿಗೆ, ಅವರು ಯಾವ ಉದ್ದೇಶದಿಂದ ಮಾಡಿದ್ದರು ಅದು ಸಫಲವಾಯಿತು. ಅವತ್ತಿನ ದಿವಸ ಜನರಲ್ ಬಾಡಿ ಆಗಬಾರದಿತ್ತು ಅದನ್ನು ತಪ್ಪಿಸಿದರು. ಈಗ ಮಾಡುತ್ತೇವೆಂದು ಹೇಳಿದರು ಸರಿಯಾಯಿತು. ಅವರಿಗೆ ಆಗಬೇಕಾಗಿದ್ದಂತಹ ಕೆಲಸ ಅಷ್ಟೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : 400 ಮೆಂಬರ್‌ನ್ನು ಬೆನಾಮಿ ಮಾಡಿಸಿ ಅದರೊಳಗೆ ಸೇರಬೇಕೆಂದು ಇದ್ದದ್ದು ಸಾಧಿಸಿದಂತೆ ಆಯಿತು. ಆ ದಿವಸ ಅವರದ್ದು ಪೋಸ್ಟ್‌ಪೋನ್ ಮಾಡಬೇಕು ಎನ್ನುವುದು ಅವರ ದೃಷ್ಟಿ. ತಮ್ಮಿಂದ ಸ್ಟೇ ಹೋದ ಮೇಲೆ ಇನ್ನಷ್ಟು ಕನ್‌ಫರ್ಮ್ ಆಯಿತು. ನ್ಯಾಯವಾಗಿ ನಡೆದುಕೊಂಡವರಿಗೆ ನ್ಯಾಯ ಸಿಗಲಿಲ್ಲ. ಅನ್ಯಾಯವಾಗಿ ಮೆಂಬರ್ಸ್ ಸೇರಬೇಕೆಂದಿದ್ದರೋ ಅವರದ್ದು ಹೋಯಿತು.

ಶ್ರೀ ಎಸ್. ಎಸ್. ಪಾಟೀಲ್ : ಅದು ಹಾಗಾಗಿಲ್ಲ. ಸೊಸೈಟಿ ರಿಜಿಸ್ಟರ್ ಆಗುವಾಗ ಎಷ್ಟು ಜನರನ್ನು ರಿಜಿಸ್ಟರ್ ಮಾಡಿಕೊಟ್ಟಿದ್ದರೋ ಅವರನ್ನು ಮಾತ್ರ ಸೇರಿಸುತ್ತೇವೆ. ಉಳಿದವರನ್ನು ಸೇರಿಸುವ ಪ್ರಶ್ನೆಯೇ ಇಲ್ಲ.

ಶಾಸನ ರಚನಾ ಕಾರ್ಯಕಲಾಪಗಳು

ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, 1997 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ಸಭೆ ಮುಂದೆ ಮಂಡಿಸಲು ತಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ,

"1997ರ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. *

12.00 ಪಿ.ಎಂ.

ಕರ್ನಾಟಕ ಗಿರವಿದಾರರ (ತಿದ್ದುಪಡಿ) ವಿಧೇಯಕ, 1997

ಶ್ರೀ ಎಸ್. ಎಸ್. ಪಾಟೀಲ್ (ಸಹಕಾರ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಗಿರವಿದಾರರ (ತಿದ್ದುಪಡಿ) ವಿಧೇಯಕ 1997ನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವನೆ ಹೀಗಿದೆ:

"1997ನೇ ಸಾಲಿನ ಕರ್ನಾಟಕ ಗಿರವಿದಾರರ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಸಭೆಯು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಗಿರವಿದಾರರ (ತಿದ್ದುಪಡಿ) ವಿಧೇಯಕ 1997ನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.*

ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ವಿಧೇಯಕ, 1997

ಶ್ರೀ ಎಸ್. ಎಸ್. ಪಾಟೀಲ್ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ವಿಧೇಯಕ 1997ನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ :

"1997ನೇ ಇಸವಿಯ ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

---

* ಅನುಬಂಧ II, * ಅನುಬಂಧ III